ದಿನಾಂಕಃ 29-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ,

1) ನಾನು ವ್ಯವಸಾಯ ಮಾಡುತ್ತೇನೆ. ನನಗೆ 9 ಎಕರೆ ವ್ಯವಸಾಯದ ಜಮೀನು ಇರುತ್ತದೆ. ಆರೋಪಿ ಗುತ್ತಿಗೆದಾರರು ಆಗಿರುತ್ತಾರೆ. ಆರೋಪಿ ಗುತ್ತಿಗೆದಾರರ ಆಗಿರುವುದಿಲ್ಲ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ಪಕ್ಕದ ಗ್ರಾಮದ ವಾಸಿ ಆಗಿವುದರಿಂದ 10 ವರ್ಷಗಳಿಂದ ನನಗೆ ಪರಿಚಯ ಇರುತ್ತಾರೆ. ನಾನು ಆರೋಪಿಯ ಮೊಬೈಲ್ ಸಂಖ್ಯೆ ಪಡೆದುಕೊಂಡಿರುವುದಿಲ್ಲ. ಆರೋಪಿಗೆ ಒಬ್ಬಳೇ ಮಗಳು.

2) ನಾನು ಆರೋಪಿಯ ಮೊಬೈಲ್ ಸಂಖ್ಯೆಗೆ ಹಣಕಾಸಿನ ವ್ಯವಹಾರದ ಬಗ್ಗೆ ಕರೆ ಮಾಡಿರುವುದಿಲ್ಲ. ನನಗೆ ಸೇರಿದ ವ್ಯವಸಾಯ ಜಮೀನಿನಲ್ಲಿ ಭತ್ತ, ತೆಂಗು, ಹೊಗೆಸೊಪ್ಪು ಮತ್ತು ಶುಂಠಿ ಬೆಳೆಯುತ್ತೇವೆ. ನಾನು ವ್ಯವಸಾಯ ಜಮೀನಿನಲ್ಲಿ ಮೇಲೆ ಹೇಳಿದ ಬೆಳೆಗಳನ್ನು ಬೆಳೆಯುತ್ತೇನೆ ಎಂದು ತೋರಿಸಲು ದಾಖಲೆ ಇರುತ್ತದೆ. ನನಗೆ ವ್ಯವಸಾಯ ಜಮೀನಿನಿಂದ ರೂ. 9 ಲಕ್ಷ ಆದಾಯ ಇರುತ್ತದೆ. ನನಗೆ ರೂ. 9 ಲಕ್ಷ ಆದಾಯ ಇದೆ ತೋರಿಸಲು ದಾಖಲೆ ಹಾಜರುಪಡಿಸಿರುವುದಿಲ್ಲ. ನಮ್ಮ ಕುಟುಂಬಕ್ಕೆ ನನ್ನ ತಾಯಿ ಕಡೆಯಿಂದ BPL ಆಹಾರ ಪಡಿತರ ಚೀಟಿ ಪಡೆದುಕೊಂಡಿರುತ್ತೇವೆ. ನಾನು ಆದಾಯ ತೆರಿಗೆ ಪಾವತಿ ಮಾಡುವುದಿಲ್ಲ.

3) ರಾಜೇಶ್ ಎಂಬುವವರು ನನ್ನ ಹೆಂಡತಿಯ ತಂಗಿಯ ಗಂಡ. ಸದರಿ ರಾಜೇಶ್ ರವರು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ರಾಜೇಶ್ ರವರ ಸ್ವಂತ ಊರು ಗೌಡನಕೊಪ್ಪಲು. ಆರೋಪಿ ಕೆಂಪನಕೊಪ್ಪಲು ಗ್ರಾಮದ ವಾಸಿ. ರಾಜೇಶ್ ಮತ್ತು ಆರೋಪಿ ಪರಿಚಯಸ್ಥರು ಎಂದರೆ ನನಗೆ ಗೊತ್ತಿಲ್ಲ.

4) ನಿಶಾನೆ ಪಿ-1 ಚೆಕ್ಕನು ನನಗೆ ಆರೋಪಿ ನೀಡಿರುತ್ತಾರೆ. ಆರೋಪಿ ಗುತ್ತಿಗೆದಾರರ ಕೆಲಸಕ್ಕಾಗಿ ಮತ್ತು ಕೆಲಸದ ಸಾಮಗ್ರಿಗಳನ್ನು ಖರೀದಿ ಮಾಡಲು ನನ್ನಿಂದ ಹಣವನ್ನು ಸಾಲವಾಗಿ ಪಡೆದುಕೊಂಡಿರುತ್ತಾರೆ. ಆರೋಪಿ ನನ್ನನ್ನು ಹಣ ಕೇಳಲು ಬಂದಾಗ ಆರೋಪಿಯ ಜೊತೆ ಆರೋಪಿ ಸ್ನೇಹಿತ ಬಂದಿದ್ದರು. ಚೆಕ್ಕನ್ನು ಬ್ಯಾಂಕಿಗೆ ನಗದೀಕರಿಸಲು ಹಾಜರುಪಡಿಸುವ ಮುನ್ನ ಆರೋಪಿಯನ್ನು ಬೇಟಿ ಆಗಿರುವುದಿಲ್ಲ. ಆರೋಪಿಯ ಖಾತೆಯನ್ನು ಮುಚ್ಚಲಾಗಿದೆ ಎಂದು ಹಿಂಬರಹ ನೀಡಿರುತ್ತಾರೆ. ಆರೋಪಿಯ ಖಾತೆಯಲ್ಲಿ ಹಣಕಾಸಿನ ವ್ಯವಹಾರ ನಡೆಯದ ಕಾರಣ ಆರೋಪಿಯ ಖಾತೆಯನ್ನು ಮುಚ್ಚಲಾಗಿದೆ ಎಂದರೆ ಸರಿ.

5) ನಿಶಾನೆ ಪಿ-1 ಚೆಕ್ಕನ್ನು ಆರೋಪಿಯೆ ಬರೆದು ನನಗೆ ನೀಡಿರುತ್ತಾರೆ. ನಾನು ನಿಶಾನೆ ಪಿ-3 ಹಿಂಬರಹದ ಪ್ರಕಾರ ತಿಳುವಳಿಕೆ ಪತ್ರವನ್ನು ದಿನಾಂಕ 06.04.2024 ರಂದು ನೀಡಲಾಗಿದೆ ಎಂದರೆ ದಿನಾಂಕ 15.04.2024 ರಂದು ನೀಡಲಾಗಿದೆ ಎಂದು ನುಡಿಯುತ್ತಾರೆ. ನಾನು ಕಳುಹಿಸಿರುವ ತಿಳುವಳಿಕೆ ಪತ್ರವನ್ನು ಆರೋಪಿ ಸ್ವೀಕರಿಸಿರುವುದಿಲ್ಲ. ದಿನಾಂಕ 20.04.2024 ರಂದು ನನಗೆ ತಿಳುವಳಿಕೆ ಪತ್ರ ವಾಪಸ್ಸು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ದಿನಾಂಕ 26.04.2024 ರವರೆಗೆ ಅಂಚೆ ಲಕೋಟೆ ಅಂಚೆ ಕಚೇರಿಯಲ್ಲಿ ಇತ್ತು ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ಕಾಲಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ